ಜಾಸ್ತಿ. ಬಸವಣ್ಣೆಪ್ಪನವರ ಕಾಲದಲ್ಲಿ ಅವರು ರಾಜಕೀಯದಲ್ಲಿದ್ದರೂ ಚುನಾವಣೆಗೆ ನಿಂತಿರಲಿಲ್ಲ. ಮನಸ್ಸು ಮಾಡಿದ್ದರೆ ಆ ಕಾಲದಲ್ಲೇ ಅವರು ಶಾಸಕರಾಗಬಹುದಿತ್ತು. ಹಾಗಂತ ಊರಲ್ಲಿ ಆಗಿನ ಕಲಿತ ಜನ ಮಾತನಾಡುತ್ತಿದ್ದರು. ಈಗ ಕಲಿತವರಿಲ್ಲ, ಮಾತನಾಡುವವರೂ ಇಲ್ಲ. ಬೆಂಗಳೂರಿಗೆ ಮನೆ ಕಟ್ಟುವ ಕೆಲಸಕ್ಕೆ ಹೋದವ ಊರಲ್ಲಿಯ ತಮ್ಮ ಹೊಲ ಕೋ ಆಪರೇಟಿವ್ ಬ್ಯಾಂಕುಗಳಿಗೆ ಅಡವಿಟ್ಟು ಹಣ ಪಡೆದು ಓಲಾ, ಉಬರ್‌ಗಳಿಗೆ ಕಾರು ಓಡಿಸುವವರೆಷ್ಟೋ! ಅಲ್ಲಿ ಕೂಲಿ ಜಾಸ್ತಿ ಸಿಗುತ್ತದೆ, ಮನೆಗೆ ಹಣ ಕಳಿಸಬಹುದೆಂದು ಹೋದರು. ನಂತರ ಊರಲ್ಲಿ ತಮ್ಮವರೆಂಬುವವರೇ ಉಳಿಯದಾದಾಗ ಯಾರಿಗೆ ಹಣ ಕಳಿಸಿಯಾರು? ಬೊಚ್ಚ ಬಾಯಿಯ ಮುದುಕ ಮುದುಕಿಯರಿಗೆ ಸರಕಾರದಿಂದ ವೃದ್ಧಾಪ್ಯ ವೇತನವೆಂದು ಅಲ್ಪ ಸ್ವಲ್ಪ ಬರುತ್ತಿತ್ತು. ಊರಲ್ಲಿಯ ಒಂದು ಪೋಸ್ಟಾಫೀಸು, ಒಂದು ಖಾಸಗಿ ಬ್ಯಾಂಕು ಇನ್ನೂ ಸ್ವಲ್ಪ ಉಸಿರಾಡುತ್ತಿದ್ದವು. ಕೆರೆ ಹೋಗಿ ಹೊಂಡವಾಗಿತ್ತು. ಬಳಸುವವರೇ ಇಲ್ಲದ್ದರಿಂದ ಸ್ವಲ್ಪ ನೀರು ಉಳಿದಿತ್ತು.

ದೇಸಾಯರ ಮನೆಯಲ್ಲೀಗ ಯಾರೂ ಇಲ್ಲ. ಬಂಕಣದಲ್ಲೇ ಫಕೀರನ ವಾಸ. ಮನೆಯ ದೊಡ್ಡ ಕಂಪೌಂಡ್‌ನಲ್ಲಿ ಮುರಿದ ರಂಟೆ ಕುಂಟೆಗಳು, ಒಂದು ಗಾಲಿ ಮುರಿದ ಚಕ್ಕಡಿ, ನೀರು ಪಾತಾಳ ಕಂಡ ಒಂದು ಬಾವಿ ಇದ್ದವು. ಮೊದ ಮೊದಲು ಅವುಗಳನ್ನು ನೋಡಿ ಫಕೀರ ನಿಟ್ಟುಸಿರು ಗರೆಯುತ್ತಿದ್ದ. ಈಗ ಅದನ್ನು ಬಿಟ್ಟಿದ್ದಾನೆ.

ಊರಲ್ಲಿಯ ಚಹಾ ಅಂಗಡಿಗಳೆಲ್ಲ ಮುಚ್ಚಿದ್ದವು. ಫಕೀರ ಮೂರು ಕಲ್ಲು ಜೋಡಿಸಿ ಇಟ್ಟುಕೊಂಡದ್ದಕ್ಕೆ ಸ್ವಲ್ಪ ಪುಳ್ಳೆ, ಒಣಗಿದ ಎಲೆ ಎಲ್ಲಾ ಸೇರಿಸಿ ಬೆಂಕಿ ಹಚ್ಚಿ ಅಲ್ಯುಮಿನಿಯಮ್ ಪಾತ್ರೆಯಲ್ಲಿ ಚಹಾ ಕಾಸಿಕೊಂಡ. ಒಂದು ಹಿಡಿಕೆ ಮುರಿದ ಕಪ್ಪಿಗೆ ಬಟ್ಟೆಯಲ್ಲಿ ಚಹಾ ಸೋಸಿಕೊಂಡ. ಕಟ್ಟೆಗೆ ಕುಳಿತು ಚಹಾ ಹೀರತೊಡಗಿದ. ಯಾಕೊ ದೇಸಾಯರ ಹಿರಿಯ ಮಗ ಸುರೇಶನ ನೆನಪು ಬಹುವಾಗಿ ಕಾಡತೊಡಗಿತ್ತು. ಅವನು ಒಮ್ಮೆ ಚುನಾವಣೆ ಗೆದ್ದು ಶಾಸಕನಾದ ಮೇಲೆ ಉಳಿದವರಿಗಿಂತ ಹೆಚ್ಚಿನ ಮೊತ್ತದ ವೃದ್ಧಾಪ್ಯ ವೇತನ ಫಕೀರನಿಗೆ ಮಾಡಿಸಿಕೊಟ್ಟಿದ್ದ. 'ಅವನ ಹೆಸರು ಹೇಳ್ಕೊಂಡು ಊಟಾ ಮಾಡ್ತೇನಿ' ಎಂದು ಆಗಾಗ ಹಳ್ಳಿಯ ಅರಳಿಕಟ್ಟೆಗೆ ಕುಳಿತಾಗ ಹೇಳುತ್ತಿದ್ದ. ಸುರೇಶ ಒಮ್ಮೆ ಎಲೆಕ್ಷನ್ನಿಗೆ ನಿಂತು ಗೆದ್ದಿದ್ದ. ಆಗ ಅವನು ಜೀಪಿನಲ್ಲಿ ಫಕೀರನನ್ನು ಕರಕೊಂಡು ಓಡಾಡಿದ್ದ. ಹಳ್ಳಿ ಹಳ್ಳಿಗಳಲ್ಲಿ ಸುರೇಶನ ಫೋಟೊ ಇರುವ ಬಣ್ಣದ ಪೇಪರುಗಳನ್ನು ಫಕೀರ ಮನೆ ಮನೆಗೆ ಕೊಟ್ಟಿದ್ದ. ಅದರಲ್ಲಿ ಏನು ಬರೆದಿದೆ, ಸುರೇಶ ಯಾವ ಪಕ್ಷದಿಂದ ನಿಂತಿದ್ದಾನೆ ಇದೆಲ್ಲ ಫಕೀರನಿಗೆ ತಿಳಿದಿರಲಿಲ್ಲ. ಹೋಗುವಾಗ ಇವನ ಕೈಯಲ್ಲಿ ಒಂದಿಷ್ಟು ನೋಟು ಕೊಟ್ಟು "ಓಟು ಹಾಕೊ ಹಿಂದಿನ ರಾತ್ರಿ ನಿನಗ ಗೊತ್ತಿದ್ದವರಿಗೆಲ್ಲ ಒಂದೊಂದು ನೋಟು ಕೊಡು" ಎಂದು ಹೇಳಿ ಹೋಗಿದ್ದ. ಇದೆಲ್ಲ ಏನು ಎಂಬ ಕೌತುಕವಿದ್ದರೂ ದಣಿಯ ಮಾತಿನಂತೆ ಫಕೀರ ನೋಟು ಹಂಚಿದ್ದ. ಸುರೇಶ ಎರಡನೇಯ ಸಲ ಇಲೆಕ್ಷನ್ನಿಗೆ ನಿಂತು ಗೆದ್ದನಂತೆ. ಆಗ ಒಂದು ಸಲ ಮಾತ್ರ ಹಳ್ಳಿ ಕಡೆ ಬಂದಿದ್ದ. ಅಷ್ಟೊತ್ತಿಗೆ ಹಳ್ಳಿಯ ಹೊರ ವಲಯದಲ್ಲಿ ಒಂದು ದೊಡ್ಡ ಪ್ರವಾಸಿ ಮಂದಿರ ನಿರ್ಮಾಣವಾಗಿತ್ತು. ಸುರೇಶ ಅಲ್ಲೇ ಇದ್ದ. ಫಕೀರನಿಗೆ ಹೇಳಿ ಕಳಿಸಿದ್ದಿಲ್ಲ, ಇವನೂ ಆ ಕಡೆ ಹೋಗಲೂ ಇಲ್ಲ.

ಸುರೇಶ ಎರಡನೇ ಸಲ ಗೆದ್ದು ಮಂತ್ರಿ ಆದನಂತೆ. ಊರಲ್ಲಿ ಜನ ಮಾತನಾಡುತ್ತಿದ್ದರು. ಮೊದಲಾದರೆ ಊರಲ್ಲಿಯ ತಲಾಠಿಯೋ, ಪೋಸ್ಟ್‌ಮಾಸ್ತರರೋ ಪೇಪರು ಓದಿ ಹೇಳುತ್ತಿದ್ದರು. ಈಗ ಬಂದಿರೊ ಪೋಸ್ಟ್ ಮಾಸ್ತರು ಬಲು ಸಿಡುಕು. ಫಕೀರನ ಪಿಂಚಣಿ ಕೊಡಲು ಸತಾಯಿಸುತ್ತಿದ್ದರು.

ಪ್ರವಾಸಿ ಬಂಗಲೆ ಬಂದ ನಂತರ ಹಳ್ಳಿಯ ಪಕ್ಕದಲ್ಲಿ ಒಂದು ಒಳ್ಳೆಯ ಡಾಂಬರು ರಸ್ತೆ ಬಂದಿತು. ಒಂದೆರಡು ಬಸ್ಸುಗಳು ಬಂದವು. "ಹುಬ್ಬಳ್ಳಿ ಕಡೆ ಹೋಕ್ಕಾವ" ಎಂದು ಯಾರೋ ಎಂದೋ ಹೇಳಿದ್ದು ಅವನು ಕೇಳಿಸಿಕೊಂಡಿದ್ದ. ಊರ ಹಬ್ಬಕ್ಕೆಂದು ಬೆಂಗಳೂರಿಗೆ ಹೋದವರು ಈಗ